ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 4, September-October 2024, Pp. 173-176
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಆಧುನಿಕ ಕನ್ನಡ ಕಥಾ ಸಾಹಿತ್ಯದಲ್ಲಿ ಮೂಢನಂಬಿಕೆ

**ಡಾ.ಸಿ.ಕೊಟ್ರಪ್ಪ**
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಬಳ್ಳಾರಿ.

**Abstract:**
*ಹೊಸಗನ್ನಡ ಸಾಹಿತ್ಯದಲ್ಲಿ ಅತ್ಯಂತ ಪ್ರಮುಖವಾದ ಸಾಹಿತ್ಯ ಪ್ರಕಾರ ಕಥಾ ಸಾಹಿತ್ಯವಾಗಿದೆ. ಈ ಕಾಲ ಘಟ್ಟದಲ್ಲಿ ಕಥಾ ಸಾಹಿತ್ಯವು ಎಲ್ಲಾ ಪ್ರಕಾರಗಳಿಗಿಂತ ತುಸು ಭಿನ್ನವಾಗಿಯೇ ಬೆಳೆದು ಬಂದಿತು. ಕೈಗಾರಿಕಾ ಕ್ರಾಂತಿಯ ನಂತರ ಸಮಯದ ಅಭಾವದ ಪರಿಣಾಮವಾಗಿ ಓದುಗರಲ್ಲಿ ದೀರ್ಘವಾದ ಕಾದಂಬರಿಗಳನ್ನು ಓದುವ ತಾಳ್ಮೆ ಕಡಿಮೆಯಾದ್ದರಿಂದ, ಸಣ್ಣಕಥೆ ಜನಪ್ರಿಯವಾಗಲು ಕಾರಣವಾಯಿತು. ಈ ಪ್ರಕಾರದ ರಚನೆಗೆ ಹೆಚ್ಚು ಪ್ರೋತ್ಸಾಹ ದೊರೆಯಿತು. ಪ್ರಸ್ತುತ ಲೇಖನದಲ್ಲಿ ಆಧುನಿಕ ಕನ್ನಡ ಕಥಾ ಸಾಹಿತ್ಯದಲ್ಲಿ ಮೂಢನಂಬಿಕೆ ಕುರಿತು ಚರ್ಚಿಸಲಾಗಿದೆ.*

**Keywords:** *ಕನ್ನಡ ಸಾಹಿತ್ಯ, ಆಧುನಿಕ ಕನ್ನಡ, ಕಥಾ ಸಾಹಿತ್ಯ, ಸಣ್ಣ ಕಥೆಗಳು, ಮೂಢನಂಬಿಕೆ.*

**ಪೀಠಿಕೆ**

ಸಾಹಿತ್ಯಯುಗದ ಪ್ರವರ್ತಕರಾದ ಪಂಜೆ ಮಂಗೇಶರಾಯರ ಆದಿಯಾಗಿ ಇಂದಿನ ದಲಿತ ಬಂಡಾಯ ಸಾಹಿತಿಗಳವರೆಗೂ ಕಥೆಗಳನ್ನು ರಚಿಸಿರುವುದನ್ನು ಕಾಣುತ್ತೇವೆ. ಕನ್ನಡ ಕಥಾ ಸಾಹಿತ್ಯದಲ್ಲಿ ವಿಭಿನ್ನ ನೆಲೆಗಳಲ್ಲಿ ಕಥೆಗಳು ರಚನೆಯಾಗಿರುವುದನ್ನು ಗುರುತಿಸಬಹುದು. ಅದರಲ್ಲಿ ಸ್ತ್ರೀವಾದಿ ಚಿಂತನೆ, ಲಿಂಗ, ಜಾತಿ, ವರ್ಣ, ಪ್ರತಿಭಟನೆ, ನಿಸರ್ಗ, ಮೂಢನಂಬಿಕೆ ಹೀಗೆ ವಿಭಿನ್ನ ವಸ್ತುಗಳನ್ನು ಹಿನ್ನೆಲೆಯಾಗಿಟ್ಟುಕೊಂಡು ಕಥೆಗಳನ್ನು ರಚಿಸಿರುವುದು ಕಂಡು ಬರುತ್ತದೆ. ಅದರಲ್ಲಿ ಆಧುನಿಕ ಕನ್ನಡ ಕಥಾ ಸಾಹಿತ್ಯದಲ್ಲಿ ಮೂಢನಂಬಿಕೆಯ ಬಗ್ಗೆ ಈ ಲೇಖನದಲ್ಲಿ ಚರ್ಚಿಸಲಾಗಿದೆ.

ಕನ್ನಡ ಕಥಾ ಸಾಹಿತ್ಯದಲ್ಲಿ ಕಥೆಯಿಂದ ಕಥಾ ವಸ್ತುವನ್ನು ಪತ್ಯೇಕಿಸಲು ಸಾಧ್ಯವಿಲ್ಲವಾದರೂ, ವಿಚಾರದ ಅನುಕೂಲಕ್ಕಾಗಿ ನಾವು ವಿಶಿಷ್ಟವಾದ ಭಿನ್ನತೆಯಿಂದ ಕೂಡಿದೆಯೆಂದು ಪರಿಭಾವಿಸಿ ನೋಡಬಹುದಾಗಿದೆ ಕಥೆಗೆ ಕಥಾ ವಸ್ತುವೆ ಪ್ರಧಾನವಾದರೂ ಅದನ್ನು ಅರಿಯುವುದು ಕಥೆಯ ಮೂಲಕವೇ ಆದ್ದರಿಂದ ಕಥೆಗೆ ಕಥಾವಸ್ತುವೆ ಭಂಗಿ, ವಿನ್ಯಾಸಗಳನ್ನು ಆದಿ ಅಂತ್ಯಗಳನ್ನು ನಿರ್ಣಯಿಸುತ್ತದೆ.

ಕಥೆಗಾರರ ಬದುಕು ಕಥಾರಚನೆಗೆ ಮೂಲ ಪ್ರೇರಣೆಯಾಗಿರುತ್ತದೆ. ಪುರೋಹಿತಶಾಹಿಯ ಹಿನ್ನೆಲೆಯಲ್ಲಿ ಬೆಳೆದಿರುವ ಕಥೆಗಾರರು ಮೂಢನಂಬಿಕೆಯನ್ನೆ ಕಥಾವಸ್ತು ಮಾಡಿಕೊಂಡು ಅನೇಕ ಕಥೆಗಳನ್ನು ರಚಿಸಿರುವುದು ಕಾಣಬಹುದು, ಅದೇ ದಲಿತ ಬಂಡಾಯ ಸಾಹಿತಿಗಳು ಬರೆದ ಕಥೆಗಳಲ್ಲಿ ಮೂಢನಂಬಿಕೆಗಿಂತ ಹಸಿವು, ದಾರಿದ್ರ್ಯ,

**Please cite this article as:** ಕೊಟ್ರಪ್ಪ, ಸಿ. (2024). ಆಧುನಿಕ ಕನ್ನಡ ಕಥಾ ಸಾಹಿತ್ಯದಲ್ಲಿ ಮೂಢನಂಬಿಕೆ *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 3(4), 173–176

ಅಸಮಾನತೆ, ಪ್ರತಿಭಟನೆ, ಜಾತಿ, ಕಥೆಯ ವಸ್ತುಗಳಾಗಿರುವುದನ್ನು ಗಮನಿಸಬಹುದು.

ಯಾರು ದೇವರ ಹೆಸರಿನಲ್ಲಿ ಪೂಜೆ, ಹರಕೆ, ಹೋಮಹವನ, ಮಡೆಸ್ನಾನಗಳಂಹ ಕ್ರಿಯೆಗಳೆಲ್ಲ ಮೂಢ ನಂಬಿಕೆಗಳೇ ಕಾರಣವೆಂದು ಹೇಳುವುದು ಕಷ್ಟವಾದರೂ, ಅದರ ಹಿಂದೆ ಅರಿತು ನಡೆದಾಗ ಪ್ರಧಾನವಾಗಿ ಗೋಚರಿಸುವುದು ಅಂಧಶ್ರದ್ಧೆಗಳೇ ಕಾರಣವೆಂಬುದನ್ನು ಮರೆಯಬಾರದು. ಹಿಂದಿನ ಕಾಲದಿಂದಲೂ ಈಗಿನ ಕಾಲದವರೆಗಿನ ಜನದೇವರು – ಧರ್ಮದ ಹೆಸರಿನಲ್ಲಿ ಮೂಢನಂಬಿಕೆಗಳನ್ನು ಪೋಷಿಕೊಂಡು, ಬೆಳೆಸಿಕೊಂಡು ಬಂದಿದ್ದಾರೆ. ಇಂತಹ ಕಥಾ ವಸ್ತುಗಳನ್ನೆ ಇಟ್ಟುಕೊಂಡು ಕನ್ನಡ ಸಾಹಿತ್ಯದಲ್ಲಿ ಅನೇಕ ಕಥೆಗಳು ರಚನೆಯಗಿವೆ.

ಉತ್ತರ ಕರ್ನಾಟಕದ ಪ್ರಸಿದ್ಧ ದೇವತೆಯಾದ ಸವದತ್ತಿ ಎಲ್ಲಮ್ಮನ ಹೆಸರಿನಲ್ಲಿ ಕೆಳವರ್ಗದ ಜನರು ಬಸವಿ ಬಿಡುವ ಪದ್ಧತಿ ಜಾರಿಯಲ್ಲಿತ್ತು. ಈ ಪದ್ಧತಿಯಿಂದಲೇ ಆತ್ಮಹತ್ಯೆ ಮಾಡಿಕೊಂಡ ಒಬ್ಬ ಹೆಣ್ಣು ಮಗಳ ದುರಂತ ಕಥೆಯಾದ ಆನಂದರ 'ನಾ ಕೊಂದ ಹುಡುಗಿ'. ಕಥೆಯಲ್ಲಿ ಕಾರ್ಯಾರ್ಥವಾಗಿ ಪರಸ್ಥಳಕ್ಕೆ ಹೋಗಿದ್ದ ನಿರೂಪಕ ಆ ಊರಿನಲ್ಲಿ ರಾತ್ರಿ ಕಳೆಯುವ ಸನ್ನಿವೇಶ ಒದಗಿ ಬರುತ್ತದೆ. ಊರಿನ ವ್ಯಕ್ತಿಯೊಬ್ಬರ ಮನೆಯಲ್ಲಿ ಉಳಿಯುತ್ತಾನೆ. ಆ ಮನೆಯಲ್ಲಿ ಸಾಂಪ್ರದಾಯಿಕ ಆಚರಣೆಯ ಪ್ರಕಾರ ಬಸವಿ ಬಿಟ್ಟ ಹುಡುಗಿ ಇರುತ್ತಾಳೆ. ನಿರೂಪಕ ತನ್ನ ಕ್ಷೇತ್ರಕಾರ್ಯದ ಟಿಪ್ಪಣಿ ಬರೆಯುತ್ತಿರುವಾಗ, ಹಾಲು ಹಿಡಿದು ಹುಡುಗಿ ಕೋಣೆಯನ್ನು ಪ್ರವೇಶ ಮಾಡುತ್ತಾಳೆ, ನಿರೂಪಕನಿಗೆ ರಾತ್ರಿ ಹೊತ್ತಿನಲ್ಲಿ ವಯಸ್ಸಿಗೆ ಬಂದ ಹುಡುಗಿ ತಾನು ಮಲಗುವ ಕೋಣೆಯ ಪ್ರವೇಶ ಮಾಡಿದ್ದು ಕಂಡು ಆಶ್ಚರ್ಯವಾಗುತ್ತದೆ ನಗರ ಪ್ರಜ್ಞೆಯ ನಿರೂಪಕ ಆ ಆವರಣದಲ್ಲಿ ಸಾಂಸ್ಕೃತಿಕ ಬೇರುಗಳನ್ನು ಗ್ರಹಿಸದೆ, ರಾತ್ರಿಯೆಲ್ಲ ಆಕೆಯ ತಪ್ಪಿನ ಅರಿವು ಮೂಡಿಸುವ ಕೆಲಸ ಮಾಡುತ್ತಾನೆ. ಆಗ ಆ ಸಂದರ್ಭದಲ್ಲಿ ಆಕೆಯ ಪ್ರತಿಕ್ರಿಯೆ ಭಯ ಮತ್ತು ಆತಂಕದಲ್ಲಿ ಮೈ ಪಡೆಯುತ್ತದೆ. ಕೊನೆಗೆ ಆಕೆ ಬೆಳಗಿನ ಜಾವ ಬಾವಿಗೆ ಹಾರಿ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಇಲ್ಲಿ ನಿರೂಪಕ ಪಶ್ಚತ್ತಾಪಕ್ಕೆ ಒಳಗಾಗುತ್ತಾನೆ. ಕಥೆಯಲ್ಲಿ ನಗರ ಪ್ರಜ್ಞೆ ಮತ್ತು ಹಳ್ಳಿಯ ಪ್ರಜ್ಞೆಗಳೆರಡು ಸಂಘರ್ಷಕ್ಕೆ ಒಳಗಾಗಿ ಕೊನೆಗೆ ಕಥೆ ದುರಂತಮಯವಾಗುತ್ತದೆ.

ಪ್ರಸ್ತುತ ಕಥೆಯಲ್ಲಿ ಕಥೆಗಾರ (ನಿರೂಪಕ) ಗ್ರಾಮೀಣ ಪರಿಸರದ ಪ್ರಜ್ಞೆಯನ್ನು ಸೂಕ್ಷ್ಮವಾಗಿ ಗ್ರಹಿಸಿದ್ದರೆ ಹುಡುಗಿಯನ್ನು ಬದುಕಿಸಬಹುದಿತ್ತು. ಕಾರಣ ಹುಡುಗಿಯ ಎದುರಿಗೆ ಪ್ರಸ್ತಾಪಿಸುವ ವಿಷಯವನ್ನು ಅವಳ ತಂದೆ–ತಾಯಿಗಳಿಗೆ ಹೇಳಿದ್ದರೆ ಪ್ರಸ್ತಾಪಿಸಿ ಅವರಿಗೆ ಅಂಧಶ್ರದ್ಧೆಯ ಮತ್ತು ಮೂಢನಂಬಿಕೆಯ ಅನಾಹುತಗಳನ್ನು, ವೈಚಾರಿಕತೆಯ ಪ್ರಜ್ಞೆಯನ್ನು ಮೂಡಿಸಿದ್ದರೆ ಆ ಮನೆತನವು ಇಂಥ ಕೃತ್ಯಕ್ಕೆ ಇಳಿಯದಂತೆ ನೋಡಿಕೊಳ್ಳಬಹುದಿತ್ತು. ಪಿತೃಪ್ರಧಾನ ವ್ಯವಸ್ಥೆಯಲ್ಲಿ ಸ್ತ್ರೀಯರಿಗಿರುವ ಮೀಸಲು ಶಾಪಗಳಲ್ಲಿ ದೇವದಾಸಿ ಪದ್ಧತಿಯು ಒಂದು. ಇಂಥ ಅನೇಕ ಮೂಢನಂಬಿಕೆಯ ಆಚರಣೆಗಳಿಂದ ಅದೆಷ್ಟೋ ಮಹಿಳೆಯರು ತಮ್ಮ ಜೀವನವನ್ನು ಮೀಸಲು ಶಾಪಗಳಲ್ಲಿ ಕಳೆದಿರುವುದನ್ನು ಕಾಣಬಹುದು. ಆನಂದರೂ ಕೂಡ ವೈದಿಕರ ಪರವಾಗಿಯೇ ಕಥಾ ರಚನೆಯಲ್ಲಿ ಕೆಲಸ ಮಾಡಿರುವುದನ್ನು ಕಾಣಬಹುದು.

ಆನಂದರ 'ನಾ ಕೊಂದ ಹುಡುಗಿ'ಯಂತೆಯೇ ನಿರಂಜನರ 'ಕೊನೆಯ ಗಿರಾಕಿ' ಕಥೆಯಲ್ಲಿ ಮೂಡಿ ಬಂದಿದೆ. ಇಲ್ಲಿಯೂ ಬಸವಿ ಬಿಟ್ಟ ಹೆಣ್ಣು ಮಗಳು ವೇಶ್ಯಾವೃತ್ತಿಯನ್ನು ಸ್ವೀಕರಿಸಿ, ಯೌವ್ವನ ಮಾಸಿದ ಮೇಲೆ ಯಾವ ಗಿರಾಕಿಯೂ ಬರುವುದಿಲ್ಲ. ಕೊನೆಗೆ ರೋಗಕ್ಕೆ ತುತ್ತಾಗಿ ಒಂಟಿಯಾಗಿ ಸಾಯುತ್ತಾಳೆ. ಕೊನೆಗೆ ಮುನ್ಸಿಪಾಲಿಟಿಯವರು ಆಕೆಯ ಸತ್ತ ದೇಹವನ್ನು ಊರ ಹೊರಗೆ ಹಾಕಿದಾಗ, ಕೊನೆಗೆ ಗಿರಾಕಿಯಾಗಿ ಹದ್ದು ಬರುತ್ತದೆ. ಇಂತಹ ದುರಂತಮಯವಾದ ಜೀವನ ಸಾಗಿಸಿ ಪ್ರಾಣಬಿಟ್ಟ ಮಹಿಳೆಯರು ಕತ್ತಲೆ ಬೆಳಕು ಭಾವನೆಗಳ ಸಂಘರ್ಷಗಳನ್ನು ಕಥೆಯಲ್ಲಿ ಹಿಡಿದಿಡಲಾಗಿದೆ.

ಬೆಳಗಾವಿ, ಬಳ್ಳಾರಿ, ಬಿಜಾಪುರ ಕೇರಿಗಳಲ್ಲಿ ಎಲ್ಲಮ್ಮ, ಹುಲಿಗೆಮ್ಮ ಹೆಸರೇಳಿಕೊಂಡು ಜೋಗತಿಯಾಗಿರುವ ಹೆಂಗಸರನ್ನು ದೇವರ ಹೆಸರಿನಲ್ಲಿ ಸ್ಥಿತಿವಂತರು ಬಳಸಿಕೊಳ್ಳುವುದು ಮೌಢ್ಯದ ಪರಮಾವಧಿ. ಕೊಡಗಿನ ಗೌರಮ್ಮನ 'ಮನುವಿನ ರಾಣಿ' ಶಾಂತಾರಸರ 'ಮಲ್ಕಮ್ಮ' ಮಾಸ್ತಿಯವರ 'ಬೀದಿಯಲ್ಲಿ ಹೋಗುವ ನಾರಿ' ಹೀಗೆ ನೂರಾರು ಕಥೆಗಳು ಮೌಢ್ಯಕ್ಕೆ ಬಲಿಯಾಗಿರುವ ನಾರಿಯರ ಕಥೆಗಳು ಕನ್ನಡ ಸಾಹಿತ್ಯದಲ್ಲಿ ದೊರೆಯುತ್ತವೆ.

ಮಾಸ್ತಿಯವರ 'ವಾಣಿಯ ಸಮಸ್ಯೆ' ಕಥೆಯಲ್ಲಿ ಇಡೀ ವಾತಾವರಣ ಸಂಪ್ರದಾಯಬದ್ಧವಾದದ್ದು, ನವೋದಯದ ಸಂದರ್ಭದಲ್ಲಿ ವಿಧವೆಯೊಬ್ಬಳಿಗೆ ಮರು ಮದುವೆಯಾಗುವ ವಿಧಾನ ವಿವಾಹ ಪರವಾಗಿ ಹೆಣ್ಣು ಧನ್ವಿಯೆತ್ತಿದ್ದು ಈ ಕಥೆಯಲ್ಲಿ ವಿಶಿಷ್ಟವಾಗಿದೆ. ಈ ಕಥೆಯಲ್ಲಿ ಬರುವ ಗಂಡಿನ ಮರುಮದುವೆಗೆ ಸಂಪತ್ತು ಒಂದೇ ಪ್ರೇರಣೆಯಲ್ಲ ಬದಲಿಗೆ ಕುಟುಂಬದ ಮೌಢ್ಯ ಕಾರಣ ಎಂಬುದನ್ನು ಮರೆಯಬಾರದು. ಇಂಥ ಕುಟುಂಬದಲ್ಲಿನ ಮೌಢ್ಯಗಳಿಗೆ, ಸಾಮಾಜಿಕ ಸಮಸ್ಯೆಗಳಿಗೆ ಗೌರಮ್ಮನವರು ಕೆಣಕಿ ಅವುಗಳಿಗೆ ಪರಿಹಾರ ಸೂಚಿಸಲು ಬಯಸುತ್ತಾರೆ.

ಬ್ರಾಹ್ಮಣ್ಯ ಮನಸ್ಸುಗಳು ವ್ಯಕ್ತಿಯೊಬ್ಬ ತಾನು ಸಂಕಷ್ಟದ ಸಮಯದಿಂದ ಪಾರಗಲು ಬಿಡದೆ ಹೇಗೆ ಕೊಳಕುಮಯವಾಗಿ ಮೌಢ್ಯವನ್ನು ಪ್ರತಿಪಾದಿಸುತ್ತವೆ ಎಂಬುದಕ್ಕೆ ದೇವಾಂಗ ಶಾಸ್ತ್ರೀಯವರ 'ಅಡ ಕತ್ತರಿ' ಕಥೆಯಲ್ಲಿ ಚಿತ್ರಿಸುತ್ತಾರೆ. ಇದು ಸೊಸೆ ಅತ್ತೆ ಮತ್ತು ಮಾವನವರ ಸಂಭಾಷಣೆಯಲ್ಲಿ ಕಂಡು ಬರುತ್ತದೆ. ಕಥೆಯಲ್ಲಿ ಗಂಡನಿಂದಲೇ ಪ್ರಾಣ ಹೋದರೆ ಮಗಳಿಗೆ ಸ್ವರ್ಗ ಸಿಗುವುದೆಂಬ ಸಮಾಧಾನ ಹಚ್ಚಿ ಕೊಳ್ಳವಷ್ಟು ತಂದೆಯ ಶಾಂತಿ, ಸಹನೆಗಳು ನಾರಿಯಲ್ಲಿಯೂ ಕಾಣಬಹುದಾಗಿದೆ. ಸ್ತ್ರಿ ಸಮಾಜದ ಮೌಢ್ಯದ ಬಗೆಗೆ ಕಥೆಗಾರರಲ್ಲಿ ತಿರಸ್ಕಾರವಿದೆ. ಧರ್ಮದ ನೆರಳಿನಲ್ಲಿ ನಡೆಯುವ ಇಂಥ ಅನಾಚರಗಳು ಮೌಢ್ಯದಿಂದಲೇ ನಡೆಯುತ್ತಿವೆ.

ಎಂ.ಎನ್. ಕಾಮತ್‌ರವರ 'ಕದ್ದವರು ಯಾರು' ಕಥೆಯಲ್ಲಿ ಬ್ರಿಟಿಷರ ಆಡಳಿತಾವಧಿಯಲ್ಲಿದ್ದ ಗ್ರಾಮೀಣ ಜೀವನವನ್ನು ಚಿತ್ರಿಸಿದೆ, ಕಥೆಯಲ್ಲಿ ವ್ಯಕ್ತವಾಗುವ ನ್ಯಾಯದ ಸ್ವರೂಪವು ಪಾರಂಪರಿಕ ಜೀವನ ವ್ಯವಸ್ಥೆಯನ್ನು ತಿಳಿಸಿ ಕೊಡುತ್ತದೆ. ಪಟೇಲ, ಶಾನುಭೋಗ, ಉಗಾಣಿ ಎಂಬ ಊರ ಹಿರಿಯರ ಮುಖಾಂತರ ಬ್ರಿಟಿಷ ಅಧಿಕಾರವು ಗ್ರಾಮೀಣ ಪ್ರದೇಶಗಳನ್ನು ನಿಯಂತ್ರಿಸಿದ ಬಗೆಯನ್ನು ಕಥೆ ಬಿಚ್ಚಿಡುತ್ತದೆ. ಹಳ್ಳಿಗಳ ಆಡಳಿತಕ್ಕೆ ಆಂಗ್ಲರ ಸಹಾಯಕರಂತೆ ಸೇವೆ ಸಲ್ಲಿಸುತ್ತಿದ್ದ ಪಟೇಲರು ಮತ್ತು ಶಾನುಬೋಗರು ಆಡಳಿತದ ರೀತಿ ನೀತಿ ಅದರ ಆಗು–ಹೋಗುಗಳು ಮತ್ತು ಸಮಾಜದ ಮೌಢ್ಯ, ಅಂಧಾನುಕರುಣೆ, ಸಂಪ್ರದಾಯದ ಹೆಸರಿನಲ್ಲಿ ಶೋಷಣೆಯ ಫಲಿತಗಳು ಈ ಕತೆಯ ಆಶಯವಾದಂತೆ ಕಾಣುತ್ತದೆ. ಮಂತ್ರವಾದಿಯು ಗೌರಮ್ಮಳಿಗೆ ಜಲದುರ್ಗ ಮಂತ್ರವನ್ನು ಹಾಕುವುದಾಗಿ ಹೇಳಿ, ರಾತ್ರಿ ನೀರಿನಲ್ಲಿ ತೋಯಿಸಿ ಊರಿನ ಬೆಂಕಿಯ ಮುಂದೆ ಕೂಡಿಸಿ ವಿಚಾರಣೆ ಆರಂಭ ಮಾಡುತ್ತಾನೆ. ಗೌರಮ್ಮ ತಪ್ಪು ಮಾಡದಿದ್ದರೂ ಅನಿವಾರ್ಯವಾಗಿ ಹಿಂಸೆಗಳನ್ನು ಅನುಭವಿಸುತ್ತಾಳೆ. ಕೊನೆಗೆ ಬೆಂಕಿಯಲ್ಲಿ ಬೀಳುವ ಪ್ರಸಂಗ ಎದುರಾಗುತ್ತದೆ. ಇವಳ ಸಾವಿಗೆ ಸಮಾಜದಲ್ಲಿ ಬೇರು ಬಿಟ್ಟಿರುವ ಮೌಢ್ಯಗಳೇ ಶೋಷಣೆಯ ಅಸ್ತ್ರಗಳಾಗಿರುವದು ಸಮಾಜದ ದುರಂತ. ಆ ಸಂದರ್ಭದಲ್ಲಿ ಬ್ರಿಟಿಷರ ಆಡಳಿತ ಅವಧಿಯು ಪ್ರಶ್ನೆಗೆ ಒಳಪಟ್ಟಿವೆ ಎಂದು ಹೇಳಬಹುದು.

ಲಂಕೇಶ್‌ರವರ 'ಮುಟ್ಟಿಸಿ ಕೊಂಡವರು' ಕಥೆಯಲ್ಲಿ ರೈತ ಬಸವಲಿಂಗ ಯಾವುದೋ ಕಾರಣಕ್ಕೆ ತನ್ನ ಎಡಗಣ್ಣು ರೋಗಕ್ಕೆ ತುತ್ತಾಗುತ್ತದೆ. ಅಲ್ಲಿ ಇಲ್ಲಿ ಎಲ್ಲಾ ಕಡೆ ತೋರಿಸಿ ಡಾ.ತಿಮ್ಮಪ್ಪ ಎಂಬ ಸರ್ಕಾರಿ ವೈದ್ಯರ ಬಳಿ ಹೋಗುತ್ತಾನೆ. ಅತ್ಯಂತ ದಯನೀಯ ಸ್ಥಿತಿಯಲ್ಲಿದ್ದ ಬಸವಲಿಂಗನಿಗೆ ಮಾನಸಿಕ ಧೈರ್ಯತುಂಬಿ, ಸಮಾಧಾನ ಮಾಡಿ ಎಡಗಣ್ಣಿನ ಶಸ್ತ್ರಚಿಕಿತ್ಸೆ ಮಾಡಿ ಔಷಧ ಬರೆದು ಕೊಟ್ಟು ಕಣ್ಣಿಗೆ

ಯಾವ ಕಾರಣಕ್ಕೆ ನೀರನ್ನು ತೋಯಿಸಬಾರದು ಎಂದು ಕೆಲವು ಸೂಚನೆ ಕೊಟ್ಟು ಕಳುಹಿಸುತ್ತಾರೆ. ಮನೆಗೆ ಬಂದ ಬಸವಲಿಂಗ ಹೆಂಡತಿಗೆ ವೈದ್ಯರ ಪರಿಚಯ ಹೇಳಿದಾಗ ವೈದ್ಯರು ಹೊಲೆಯ ಜಾತಿಗೆ ಸೇರಿದವನು ಎಂದು ಗೋತ್ತಾದಾಗ ಮನೆಯಲ್ಲಿ ಸೂತಕವಾಯಿತು ಎಂದು ಹೇಳಿ ಗಂಡನಿಗೆ ಬಿಸಿ ನೀರಿನಿಂದ ಅಡಿಯಿಂದ ಮುಡಿಯವರೆಗೆ ಸ್ನಾನ ಮಾಡಿಸುತ್ತಾಳೆ. ಎರಡು ಮೂರು ದಿನ ಬಿಟ್ಟು ಕಣ್ಣು ಸಾಕಷ್ಟು ಬಾವು ಬಂದು ಕಣ್ಣು ಕಳೆದು ಕೊಳ್ಳುತ್ತಾನೆ. ಅದರ ಪರಿಣಾಮವಾಗಿ ಬಲಗಣ್ಣು ಕೂಡ ರೋಗಕ್ಕೆ ತುತ್ತಾಗುತ್ತದೆ. ಕೊನೆಗೆ ಬೇರೆ ಬೇರೆ ವೈದ್ಯರ ಬಳಿ ತೋರಿಸಿದರೂ ವಾಸಿಯಾಗವುದಿಲ್ಲ. ಕೊನೆಗೆ ಮತ್ತೆ ಡಾ.ತಿಮ್ಮಪ್ಪ ಅವರ ಹತ್ತಿರ ಹೋಗುತ್ತಾನೆ ಮುಜುಗರದಿಂದ ಹಿಂದೆ ನಡೆದ ಘಟನೆಯನ್ನು ವಿವರವಾಗಿ ಹೇಳುತ್ತಾನೆ. ತಿಮ್ಮಪ್ಪ ಅದನ್ನೆಲ್ಲ ಮರೆತು ಅವನ ಮತ್ತೊಂದು ಕಣ್ಣಿನ ಶಸ್ತ್ರಚಿಕಿತ್ಸೆ ಮಾಡಿ ಕೆಲವು ಸೂಚನೆ ಕೊಟ್ಟು ಈ ಹಿಂದೆ ಮಾಡಿಕೊಂಡಂತೆ ಮಾಡಿಕೊಳ್ಳಬೇಡಿ ಎಂದು ಹೇಳಿ ಕಳುಹಿಸುತ್ತಾರೆ ಒಂದು ಕಣ್ಣನ್ನು ಉಳಿಸಿಕೊಳ್ಳುತ್ತಾನೆ.

ದೈಹಿಕ ಕಾಯಿಲೆಯನ್ನು ಗುಣಪಡಿಸಿಕೊಳ್ಳಲು ವೈದ್ಯರ ಬಳಿ ಹೋಗುವ ಬಸವಲಿಂಗ ಮಾನಸಿಕ ಕಾಯಿಲೆಯಿಂದ ತನ್ನ ರೋಗವನ್ನು ಉಲ್ಬಣಗೊಳಿಸಿಕೊಳುತ್ತಾನೆ. ಸೂತಕದ ಹೆಸರಿನಲ್ಲಿ ಜಾತಿ, ಧರ್ಮ, ಮೌಢ್ಯ, ಸಂಪ್ರದಾಯಕ್ಕೆ ಬಲಿಯಾಗುವ ಎಷ್ಟೋ ಜನರು ಈ ಸಮಾಜದಲ್ಲಿದ್ದಾರೆ. ಪರಂಪರೆಯಾಗಿ ಬಂದ ಇಂತಹ ಅನಿಷ್ಟ ಪದ್ದತಿಗಳನ್ನು ನಮ್ಮ ಜನ ಇನ್ನೂ ಬಿಟ್ಟಿಲ್ಲ ಎಂಬುದೇ ನೋವಿನ ಸಂಗತಿ.

ಕೇರೂರು ವಾಸುದೇವಾಚಾರ್ಯರು 'ತೊಳೆದ ಮುತ್ತು' ಕಥೆಯಲ್ಲಿ ಪಾಶ್ಚತ್ಯರ ರೀತಿ ನೀತಿಗಳು ಮೌಢ್ಯದಿಂದ ಕೂಡಿದ್ದವು ಎಂಬುದನ್ನು ಕಥೆ ಅನಾವರಣಗೊಳಿಸುತ್ತದೆ. ಕಥೆಯನ್ನು ಕಥಾನಾಯಕ ಹಿರಿಯರ ಒತ್ತಾಯಕ್ಕೆ ಮದುವೆಯಾಗಿ ಹೆಂಡತಿಯ ಮುಖವನ್ನು ನೋಡಿ, ಅವಳ ಬಗ್ಗೆ ತಿರಸ್ಕಾರ ಬೆಳೆಸಿಕೊಂಡು ಕೊನೆಗೆ ತಾನು ಒಲ್ಲದ ಹೆಂಡತಿಯಲ್ಲೆ ಅನಿರೀಕ್ಷಿತವಾಗಿ ಹೊಸ ಸೌಂದರ್ಯ ಕಾಣುವ ನೋಟವಿದೆ. ಪುನಃ ಅವಳನ್ನೆ ಕೂಡುವ ಪ್ರಸಂಗ ವಿಡಂಬನೆಯಾಗಿದೆ. ಕಥೆಯಲ್ಲಿ ಸಂಪ್ರದಾಯದ ಬಿಗಿ ಹಿಡಿತ, ಸ್ತ್ರೀಯರ ಅಸಮಾನತೆ ಕಥೆಯ ಆಶಯವಾಗಿದೆ.

ನಾಗವೇಣಿಯವರ 'ಒಡಲು' ಕಥೆಯಲ್ಲಿ ತಿಮ್ಮಪ್ಪ ಗುಜರ್‌ನ ಮೊಮ್ಮಗುವಿಗೆ ತೊದಲು ಕಳೆಯಲು, ಉಳ್ಳಾಲದ ದರ್ಗಾಕ್ಕೆ ಚಿನ್ನದ ನಾಲಿಗೆ ಹಾಕುವೆನೆಂದು ಹರಕೆ ಕಟ್ಟಿಕೊಂಡು ಒಂದು ವರ್ಷ ಕಳೆಯುವುದರೊಳಗೆ ಮಗುವಿನ ಮಾತು ಸಲಿಸಾಗಿ ನಾಲಿಗೆ ಸರಿಯಾಗಿತ್ತು. ಕಳೆದು ಉರುಸಿಗೆ ಇದೇ ವೀರಾಂಜನೇಯ ವ್ಯಾಯಾಮ ಶಾಲೆಯವರು ಕುಸ್ತಿ ಗೆಲ್ಲುವ ಬಗ್ಗೆ ದರ್ಗಾಕ್ಕೆ ಆಡು ಬಿಡುತ್ತೇನೆಂಬ ಹರಕೆಗಳು, ಮನುಷ್ಯನ ನಂಬಿಕೆಗಳು ಮುಖ್ಯವೆನಿಸುತ್ತವೆ. ಎಲ್ಲೋ ಒಂದು ಕಡೆ ನಾವು ಅಂದು ಕೊಂಡದ್ದು ಆಗಿ ಹೋದಾಗ ಜನರನ್ನು ಇನ್ನೂ ಮೌಢ್ಯದ ಕಡೆ ಕೊಂಡೋಯ್ಯುತ್ತವೆ.

ಸಂಪ್ರದಾಯದ ಹೆಸರಿನಲ್ಲಿ ಮೌಢ್ಯಗಳನ್ನು ಬಿತ್ತುವ ಕ್ರಿಯೆಗಳು ನಮ್ಮ ಸಮಾಜದಲ್ಲಿ ರೂಢಿಯಲ್ಲಿವೆ. ಅವೇ ಕಥೆಗಾರರಿಗೆ ಕಥಾ ವಸ್ತುಗಳಾಗಿವೆ. ಪುರೋಹಿತಶಾಹಿಯು ಇವತ್ತಿಗೂ ಅದನ್ನು ಪೋಷಿಸಿಕೊಂಡು ಬಂದಿದೆ.

**ಪರಾಮರ್ಶನ ಗ್ರಂಥಗಳು**


- ಅಮೂರ ಜಿ.ಎಸ್. (2013). *ಕನ್ನಡ ಕಥನ ಸಾಹಿತ್ಯ – ಸಣ್ಣಕತೆ.* ಪ್ರಿಯದರ್ಶಿನಿ ಪ್ರಕಾಶನ.
- ರಾಮಚಂದ್ರರಾವ್ ಸಿ.ಎನ್. (2014). *ಸಾಹಿತ್ಯ ವಿಮರ್ಶೆ.* ಅಂಕಿತ ಪುಸ್ತಕ.
- ನಿರಂಜನ (ಪ್ರ.ಸಂ.) (2012) ಧರಣಿ ಮಂಡಲ ಮಧ್ಯದೊಳಗೆ (ವಿಶ್ವ ಕಥಾ ಕೋಶ ಮಾಲಿಕೆ–1). ನವ ಕರ್ನಾಟಕ ಪ್ರಕಾಶನ.